# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 12-08-2010 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಪಿ.ಎಸ್.ಸದಾಶಿವ – ಅಧ್ಯಕ್ಷರು | ಉಪ ಆಯುಕ್ತರು (ಆರೋಗ್ಯ/ಜಾಹಿರಾತು) |
| ಕೆ.ಚಂದ್ರಶೇಖರ್ – ಸದಸ್ಯರು | ಉಪ ಆಯುಕ್ತರು(ಭೂಸ್ವಾಧೀನ) |
| ಎನ್.ವೀರಣ್ಣ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ |
| ಜಿ.ಮಂಜುನಾಥ ರಾಜು – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಎಂ.ಜಿ.ಜಯರತ್ನ – ಸದಸ್ಯರು | ಪ್ರದಾನ ಅಭಿಯಂತರರು |
| ಶಕೀಲಾ.ಎಂ – ಸದಸ್ಯರು | ಮುಖ್ಯ ಅಭಿಯಂತರರು (ಮಾರುಕಟ್ಟೆ) |
| ಟಿ.ಎ.ಗಾಯಿತ್ರಿ – ಸದಸ್ಯರು | ಜಂಟಿ ನಿರ್ದೇಶಕರು (ಪಶು ಆರೋಗ್ಯ) |
| | ಸಹಾಯಕ ಆಯುಕ್ತರು (ಆಡಳಿತ)/(ನೇಮಕಾತಿ&ವಿಚಾರಣೆ) |
| | ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಾಹೀರಾತು) |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

**01]. ವಿಷಯದ ಸಂಖ್ಯೆ :–ತೆಆಸ್ಥಾಸ/01/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಎಲ್/ಎ/ಕ್ಯೂ/ಸಿಆರ್/11/2010–11, ದಿನಾಂಕ : 25–06–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಕಛೇರಿಯ ಕಟ್ಟಡದ ಎದುರು ಭಾಗದಲ್ಲಿರುವ **"ಹಡ್ಸನ್ ಚರ್ಚ್"**ನ ಹಿಂಭಾಗದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪೆಟ್ರೋಲ್ ಬಂಕ್ ಎದುರಿನ ರಸ್ತೆ ಕಿರಿದಾಗಿದ್ದು, ಈ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ಸುಗಮ ವಾಹನ ಸಂಚರಕ್ಕೆ ತೀವ್ರ ತಡೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಪೆಟ್ರೋಲ್ ಬಂಕ್ ಎದುರಿನ ರಸ್ತೆಯನ್ನು ಹಾಗೂ ವೃತ್ತವನ್ನು ವಿಸ್ತರಿಸುವ ಅವಶ್ಯಕತೆಯಿದ್ದು, ಅದಕ್ಕಾಗಿ ಪೆಟ್ರೋಲ್ ಬಂಕ್ ಇರುವ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಪೆಟ್ರೋಲ್ ಬಂಕ್ ಇರುವ ಜಾಗದ ಹಕ್ಕು ದಾಖಲೆ ಹಾಗೂ ಇತರೆ ಅಗತ್ಯ ದಾಖಲೆಗಳಾದ ಖಾತೆ ನಕಲು, ಆಸ್ತಿಯ ನಕ್ಷೆ, ಹಾಗೂ ಆಸ್ತಿಯ ವ್ಯಾಲ್ಯುವೇಷನ್‌ನನ್ನು ತಯಾರಿಸಿ, ಸಲ್ಲಿಸಲು ಮುಖ್ಯ ಅಭಿಯಂತರರು ( ಮೇಜರ್ ರೋಡ್ಸ್) ರವರನ್ನು ಕೋರಲಾಗಿ ಸದರಿಯವರು ಕಡತ ತಯಾರಿಸಿ ನಕ್ಷೆ, ಖಾತಾ ನಕಲು, ಹಾಗೂ ವ್ಯಾಲ್ಯುವೇಷನ್ ತಃಖ್ತೆ ತಯಾರಿಸಿ, ಈ ಆಸ್ತಿಯನ್ನು ಭೂಸ್ವಾಧಿನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ, ಇವರು ದಿನಾಂಕ : 18–06–2010 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸಂಪಂಗಿರಾಮನಗರದ ಎಲ್.ಎ. ನಂ.82 ರ ಸಿ.ಟಿ.ಎಸ್. ನಂ.4118ರ ದಾಖಲಾತಿಯಂತೆ, ಖಾತೆ ನಂ. 19/1 (ಹಳೆ ಸಿ.ಟಿ.ಎಸ್. ನಂ.19/1) ರಲ್ಲಿ, 457.1 ಚ.ಮೀ. ಎಂದು ದಾಖಲಾಗಿದ್ದು, ಅಖೈರಾಗಿ. ಸಿ.ಟಿಎಸ್. ನಂ. 4118 ಎಂದೂ, ಇದರ ಖಾತೆದಾರರು **"ಚರ್ಚ್ ಆರ್ಫ ಸೌತ್ ಇಂಡಿಯ"** ಎಂದು ಖಾತೆ ದಾಖಲಾಗಿರುತ್ತದೆ. ಈ ಆಸ್ತಿಯು ಸಹಾಯಕ ಕಂದಾಯ ಅಧಿಕಾರಿಗಳು, ವಸಂತನಗರ ಉಪ ವಿಭಾಗ, ಬಿಬಿಎಂಪಿ, ಇವರ ಕಛೇರಿ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸಿಟಿ ಸರ್ವೆ ದಾಖಲೆಯಂತೆ ಹಾಗೂ ಸ್ಥಳದಲ್ಲಿ ಸರ್ವೆಯರ್‌ರವರು ಅಳತೆ ಮಾಡಿ ಸಲ್ಲಿಸಿರುವ ನಕ್ಷೆಯಂತೆ ಸಿ.ಟಿ.ಎಸ್. ನಂ.4118 (ಹಳೆ ಸಿ.ಟಿ.ಎಸ್. ನಂ.19/1) ವಿಸ್ತೀರ್ಣ 457.10 ಚದರ ಮೀಟರ್‌ಗಳಾಗಿದ್ದು (4920.22 ಚ.ಅ), ಈ ವಿಸ್ತೀರ್ಣವನ್ನು ಭೂಸ್ವಾಧೀನಕ್ಕೆ ಪ್ರಸ್ತಾಪಿಸಲಾಗಿದೆ.

ಸರ್ಕಾರದ ಮಾರ್ಗಸೂಚಿ ದರದನ್ವಯ, ಈ ಆಸ್ತಿಯು ಇರುವ ರಸ್ತೆಯಲ್ಲಿ ಮಾರುಕಟ್ಟೆ ಬೆಲೆಯು ಚ.ಅ. ಒಂದಕ್ಕೆ 5000/– ರೂ.ಗಳು ಇರುತ್ತದೆ. ಈ ಮಾರುಕಟ್ಟೆ ಬೆಲೆಯನ್ನು ಪರಿಗಣಿಸಿದಾಗ ಈ ಆಸ್ತಿಯ ಭೂಸ್ವಾಧೀನಕ್ಕೆ ತಗುಲುವ ಪರಿಹಾರದ ಮೊತ್ತ (1894 ರ ಭೂಸ್ವಾಧೀನ ಕಾಯ್ದೆಯಡಿಯಲ್ಲಿ) ಈ ಕೆಳಕಂಡಂತಿರುತ್ತದೆ.

**‘ಅ’**

| | | |
|---|---|---|
| ಭೂಸ್ವಾಧೀನಪಡಿಸಿಕೊಳ್ಳುವ ಆಸ್ತಿಯ ಒಟ್ಟು ವಿಸ್ತೀರ್ಣ ಚ.ಮೀ 457.10 x 10.764 | 4920.22 ಚ.ಅ. | |
| ಮಾರ್ಗಸೂಚಿ ಬೆಲೆ ಚ.ಅ. 1ಕ್ಕೆ 5000/– ರೂ. ಗಳಂತೆ | 4920.22 x 5000 | 2,46,01,100–00 |
| ಈ ಪ್ರದೇಶದಲ್ಲಿ ಇರುವ ಪೆಟ್ರೋಲ್ ಬಂಕ್‌ನ ಒಟ್ಟು ಮೌಲ್ಯ | 16,23,229–00 | |
| ಇದರಲ್ಲಿ ಪುನಃ ಉಪಯೋಗಿಸಬಹುದಾದ ಸಾಮಾಗ್ರಿಗಳ ಮೌಲ್ಯವನ್ನು (Cost of re-usable material) ವಜಾಕರಿಸಿ | (–) 7,44,551–00 | |
| | ––––––––––––– | |
| ನಿವ್ವಳ | 8,78,678–00 | 8,78,678–00 |
| | | ––––––––––––– |
| | | 2,54,79,778–00 |
| ಈ ಮೊಬಲಗಿಗೆ 1894 ಭೂಸ್ವಾಧೀನ ಕಾಯ್ದೆಯನ್ವಯ ಕಲಂ 23(1)(ಎ) ರನ್ವಯ, ಮಾರುಕಟ್ಟೆ ಬೆಲೆಯ ಮೇಲೆ ಸಾಲಿಯಾನ ಶೇ.12% ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | | 30,57,573–00 |
| 1894 ರ ಭಾಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ದ ಭತ್ಯೆ, ಶೇ. 30% ರಂತೆ | | 76,43,933–00 |
| | | –––––––––––––– |
| | ಒಟ್ಟು | 3,61,81,284–00 |
| | | –––––––––––––– |

**‘ಆ’**

<u>ಇತರೇ ವೆಚ್ಚಗಳು</u>

| | |
|---|---|
| ಆಡಿಟ್ ವೆಚ್ಚ ಶೇ.10 ರಷ್ಟು | 36,18,128–00 |
| ಸಿಬ್ಬಂದಿ ವೆಚ್ಚ ಶೇ.1 ರಷ್ಟು | 3,61,812–00 |
| ಪ್ರಕಟಣಾ ಚೆಚ್ಚ | 2,00,000–00 |
| ಒಟ್ಟು | 41,79,940–00 |

(ಅ+ಆ) 4,03,61,224–00



ಮೇಲ್ಕಂಡ ಸ್ವತ್ತಿನ ಭೂಪರಿಹಾರದ ಮೊತ್ತವು (ಅ+ಆ) ಒಟ್ಟು 4,03,61,224/– ರೂ.(ನಾಲ್ಕು ಕೋಟಿ ಮೂರು ಲಕ್ಷದ ಆರವತ್ತೋಂದು ಸಾವಿರದ ಎರಡುನೂರ ಇಪ್ಪತ್ನಾಲ್ಕು ರೂಪಾಯಿಗಳು ಮಾತ್ರ), ಈ ಕುರಿತು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

ರ್ಣಯ :- ಆಯುಕ್ತರವರ ದಿನಾಂಕ : 25-06-2010ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪುತ್ತಾ, ಈ ಸ್ವತ್ತಿನ ಸ್ವಲ್ಪ ಭಾಗ 5730 ಚ.ಅ. ಜಾಗವನ್ನು ಮೆ॥. ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೋರೇಷನ್ (ಲಿ.) ರವರಿಗೆ 1962ರಲ್ಲಿ ಗುತ್ತಿಗೆಗೆ ನೀಡಿರುವುದು ಕಂಡುಬಂದಿದ್ದು, ಚರ್ಚ್‌ನ ಆಸ್ತಿಗೆ ತೆರಿಗೆ ನಿಗಧಿ ಮಾಡುವಾಗ ಮೆ॥. ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೋರೇಷನ್ (ಲಿ.) ರವರಿಗೆ ಲೀಸ್ ನೀಡಿರುವ ವಾಣೀಜ್ಯ ಉದ್ದೇಶಿತ ಸ್ವತ್ತಿನ ಮೌಲ್ಯವನ್ನು ಪರಿಗಣಿಸಿರುವುದು ಕಂಡುಬರುತ್ತಿಲ್ಲ. ಆದುದರಿಂದ ಲೀಸ್ ನೀಡಿರುವ ಸ್ವತ್ತಿಗೆ 1962 ರಿಂದ ತಹಲ್‌ವರೆವಿಗೂ ಎಲ್ಲಾ ವರ್ಷಗಳ ತೆರಿಗೆಯನ್ನು ವಾಣೀಜ್ಯ ದರದಲ್ಲಿ ಪರಿಷ್ಕರಿಸಿ ಸದರಿ ತೆರಿಗೆ ಮೊತ್ತವನ್ನು ಪರಿಹಾರದ ಮೊತ್ತದಲ್ಲಿ ಕಟಾವು ಮಡಿಕೊಂಡು ಉಳಿದ ಮೊತ್ತವನ್ನು ನೀಡುವುದೆಂದು ಸಮಿತಿಯು ತಿರ್ಮಾನಿಸಲಾಯಿತು.

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/05/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಮು.ಅ(ಮಾ)/ಪಿಆರ್/69/2010–11 ರಲ್ಲಿ ವಿವರಿಸಿರುವಂತೆ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣವು ಸುಮಾರು 225 ಚ.ಕಿ.ಮೀ.ಗಳಾಗಿದ್ದು. 100ಜನ ನಗರಸಭಾ ಸದಸ್ಯರು ಹಾಗೂ 13 ಜನ ವಿಧಾನಸಭಾ ಸದಸ್ಯರು ಇದ್ದಾಗ ಅಂದಿನ ಅವಶ್ಯಕತೆಗಳಿಗೆ ಅನುಗುಣವಾಗಿ ಕೆಂಪೇಗೌಡ ಪೌರ ಸಭಾಂಣ ಕಟ್ಟಡವನ್ನು ನಿರ್ಮಾಣ ಮಾಡಲಾಗಿತ್ತು.

ಈಗ ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಮಾರ್ಪಟ್ಟಿದ್ದು ಸುಮಾರು 820 ಚ.ಕಿ.ಮೀ.ಗಳ ವ್ಯಾಪ್ತಿಯುಳ್ಳ ವಿಸ್ತಾರವಾದ ಪ್ರದೇಶವಾಗಿದ್ದು. 198 ಜನ ನಗರಸಭಾ ಸದಸ್ಯರು ಹಾಗೂ 28 ಜನ ವಿಧಾನ ಸಭಾಸದಸ್ಯರನ್ನು ಒಳಗೊಂಡಿರುತ್ತದೆ. ಇಂದಿನ ಅವಶ್ಯಕತೆಗಳಿಗೆ ಅನುಗುಣವಾಗಿ ಕೌನ್ಸಿಲ್ ಸಭಾಂಗಣವನ್ನು ನಿರ್ಮಾಣ ಮಾಡಬೇಕಾಗಿರುತ್ತದೆ ಹಾಗೂ ವಾಹನ ನಿಲುಗಡೆಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಬೇಕಾಗಿರುತ್ತದೆ.

*ಪಾಲಿಕಾ ಭವನ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎರಡು ರೀತಿಯ ವಿನ್ಯಾಸಗಳನ್ನು ಪಡೆಯಲು ಉದ್ದೇಶಿಸಲಾಗಿದೆ.*

1. ಅನೆಕ್ಸ್ ಕಟ್ಟಡ ಬಿಟ್ಟು ಲಭ್ಯವಿರುವ ಖಾಲಿ ನಿವೇಶನದ ವಿಸ್ತೀರ್ಣ ಸುಮಾರು 7700 ಚ.ಮೀ.ಗಳಲ್ಲಿ ಕಟ್ಟಡ ನಿರ್ಮಿಸುವುದು.
2. ಅನೆಕ್ಸ್ ಕಟ್ಟಡ ಸೇರಿ ಲಭ್ಯವಿರುವ ಖಾಲಿ ನಿವೇಶನದ ವಿಸ್ತೀರ್ಣ ಸುಮಾರು 13200 ಚ.ಮೀ.ಗಳಲ್ಲಿ ಕಟ್ಟಡ ನಿರ್ಮಿಸುವುದು.

*ಪ್ರಸ್ತಾವಿಕ ಪಾಲಿಕೆ ಭವನ ಕಟ್ಟಡದಲ್ಲಿ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ.*

1. ಕೌನ್ಸಿಲ್ ಹಾಲ್–300 ಆಸನಗಳನ್ನು ವ್ಯವಸ್ಥೆಯ ಸಭಾಂಗಣ ಹಾಗೂ ಪ್ರತ್ಯೇಕ ಊಟದ ಕೊಠಡಿ
2. ಕಮಿಟಿ ಹಾಲ್ ಸಂಖ್ಯೆ 15: ಸುಮಾರು 40 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ಹಾಗೂ ಆಪ್ತ ಕಾರ್ಯದರ್ಶಿ ಕೊಠಡಿ.
3. ಮೀಟಿಂಗ್ ಹಾಲ್ ಸಂಖ್ಯೆ 2: ಸುಮಾರು 250 ಹಾಗೂ 100 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು.
4. ಪೂಜ್ಯ ಮಹಾಪೌರರ ಕೊಠಡಿ ( Ante Room ಸೇರಿ ) ಸುಮಾರು 100 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶಕಲ್ಪಿಸುವುದು ಹಾಗೂ ಆಪ್ತ ಕಾರ್ಯದರ್ಶಿಗಳ ಕೊಠಡಿ ಮತ್ತು ಕಛೇರಿಗೆ ಸ್ಥಳಾವಕಾಶ.
5. ಪೂಜ್ಯ ಉಪ ಮಹಾಪೌರರ ಕೊಠಡಿ, ಸುಮಾರು 50ಆಸನಗಳ ವ್ಯವಸ್ಥೆಯೊಂದಿಗೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಮತ್ತು ಆಪ್ತ ಕಾರ್ಯದರ್ಶಿಗಳ ಕೊಠಡಿ.
6. ಆಡಳಿತ ಪಕ್ಷದ ನಾಯಕರ ಕೊಠಡಿ, ಸುಮಾರು 25 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
7. ವಿರೋಧ ಪಕ್ಷದ ನಾಯಕರ ಕೊಠಡಿ, ಸುಮಾರು 25 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
8. ಮಾಜಿ ಮಹಾಪೌರರುಗಳಿಗೆ–30 ಆಸನಗಳ ವ್ಯವಸ್ಥೆಯ ಕೊಠಡಿ.
9. ಮಹಿಳಾ ನಗರಸಭಾ ಸದಸ್ಯರುಗಳ ಕೊಠಡಿ–100 ಆಸನಗಳ ವ್ಯವಸ್ಥೆಯ ಕೊಠಡಿ.
10. ಕೌನ್ಸಿಲ್ ವಿಭಾಗದ ಕಛೇರಿಗಳು ಸಂಖ್ಯೆ–2.
11. ಮಾನ್ಯ ಆಯುಕ್ತರರವರ ಕೊಠಡಿ, ಸುಮಾರು 50 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
12. ವಿಶೇಷ ಆಯುಕ್ತರವರ ಕೊಠಡಿ, ಸುಮಾರು 25 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ ಮತ್ತು ಕಛೇರಿಗೆ ಸ್ಥಳಾವಕಾಶ
13. ಅಪರ ಆಯುಕ್ತರು (ಆಡಳಿತ) ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
14. ಉಪ ಆಯುಕ್ತರು (ಆಡಳಿತ) ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
15. ಪೋಲಿಸ್ ಮಹಾ ನಿರೀಕ್ಷಕರು, ಬಿ.ಎಂ.ಟಿ.ಎಫ್ ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
16. ಪ್ರಧಾನ ಅಭಿಯಂತರರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
17. ತಾಂತ್ರಿಕ ಸಲಹೆಗಾರರ ಕೊಠಡಿ (Ante Room ಸೇರಿ).
18. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ (Ante Room ಸೇರಿ).
19. ಮುಖ್ಯ ಆರೋಗ್ಯಾಧಿಕಾರಿ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
20. ಸಾರ್ವಜನಿಕ ಸಂಪರ್ಕಾಧಿಕಾರಿ ಕೊಠಡಿ ಹಾಗೂ ಕಛೇರಿಗೆ ಸ್ಥಳಾವಕಾಶ.
21. ಡಿ.ಸಿ.ಎಫ್.ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.

22. ಮುಖ್ಯ ಲೆಕ್ಕಾಧಿಕಾರಿಗಳ ಕೊಠಡಿ.
23. ಕಾನೂನು ಸಲಹೆಗಾರರ ಕೊಠಡಿ.
24. ಮುಖ್ಯ ಆರ್ಥಿಕ ಅಧಿಕಾರಿ ಕೊಠಡಿ.
25. ಜಂಟಿ ನಿರ್ದೇಶಕರು (ನಗರ ಯೋಜನೆ).
26. ಜಂಟಿ ಆಯುಕ್ತರು (ಕಲ್ಯಾಣ) ರವರ ಕೊಠಡಿ.
27. ಜಂಟಿ ಆಯುಕ್ತರು (ಆರೋಗ್ಯ ಮತ್ತು ಜಾಹಿರಾತು) ರವರ ಕೊಠಡಿ.
28. ಮುಖ್ಯ ಲೆಕ್ಕ ಪರಿಶೋಧಕರವರ ಕೊಠಡಿ.
29. ನಿಯಂತ್ರಣ ಕೊಠಡಿ.
30. ಜಂಟಿ ಆಯುಕ್ತರು (ಆಸ್ತಿಗಳು) ರವರ ಕೊಠಡಿ
31. ಅಂತರಿಕ ಭದ್ರತಾ ಕೊಠಡಿ.
32. ಭದ್ರತಾ ಕೊಠಡಿ–ಅಗ್ನಿಶಾಮಕ ದಳ.
33. ಬ್ಯಾಂಕ್.
34. ಅಂಚೆ ಕಛೇರಿ.
35. ಉಪಹಾರ ಗೃಹ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪಾಲಿಕಾ ಭವನ ನಿರ್ಮಾಣ ಇದರಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲು 3 ರಿಂದ 4 ತಳಮಹಡಿಗಳನ್ನು ನಿರ್ಮಿಸಿ ನವೀನ ರೀತಿಯ, ಸುಸಜ್ಜಿತವಾದ, ಹಾಗೂ ಆಕರ್ಷಣೀಯವಾಗಿ ( State of the Art ) ನಗರದಲ್ಲಿ ಒಂದು ಕೇಂದ್ರ ಬಿಂದುವಾಗಿ ರೂಪಿಸುವ ಕಟ್ಟಡ ನಿರ್ಮಿಸಲು ಒಟ್ಟಾರೆಯಾಗಿ ಯೋಜನೆಯನ್ನು ತಯಾರಿಸಲು ಟೆಂಡರ್ ಕರೆದು ಸಮಾಲೋಚಕರನ್ನು ನಿಯೋಜಿಸಲು ಅನುಮೋದನೆ ಕೋರಿ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ</u> :- ಆಯುಕ್ತರವರ ದಿನಾಂಕ : 26-06-2010ರ ಟಿಪ್ಪಣಿಯನ್ನು ಒಪ್ಪಿದೆ.

**<u>03].ವಿಷಯದ ಸಂಖ್ಯೆ :–ತೆಆಸ್ಥಾಸ/08/2010–11</u>**

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಬಿ12(2)/ಪಿಆರ್/85/2007–08, ದಿನಾಂಕ:21–07–2010 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಆರೋಗ್ಯ ಮತ್ತು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್–ಸಿ ಮತ್ತು ಗ್ರೂಪ್–ಡಿ ಹುದ್ದೆಗಳಾದ ಪೌರಕಾರ್ಮಿಕ/ಗ್ಯಾಂಗ್‌ಮನ್/ಶುಶ್ರೂಷಕಿಯರು/ಎ.ಎನ್.ಎಂ/ಫಾರ್ಮಾಸಿಸ್ಟ್/ಸಬ್ ರಿಜಿಸ್ಟರ್ ಹಾಗೂ ವಿವಿಧ ವೃಂದದ ಶಿಕ್ಷಕರ ಹುದ್ದೆಗಳನ್ನು ನಗರಪಾಲಿಕೆಯ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸಲು ನೇರ ನೇಮಕಾತಿಯಿಂದ ತುಂಬಿಕೊಳ್ಳಲು ಸರ್ಕಾರವು ಈ ಕೆಳಕಂಡಂತೆ ಅನುಮೋದನೆ ನೀಡಿದೆ.

| ಕ್ರಮ ಸಂಖ್ಯೆ | ಸರ್ಕಾರದ ಅನುಮೋದನೆ ಸಂಖ್ಯೆ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು |
|---|---|---|---|
| 01 | ನಅಇ 139 ಎಂ.ಎನ್.ವೈ 2005, ಬೆಂಗಳೂರು, ದಿನಾಂಕ : 04–06–2009 | ಶುಶ್ರೂಷಕಿಯರು (Staff Nurse) | 30 |
| | | ಎ.ಎನ್.ಎಂ (ANM) | 63 |
| | | ಫಾರ್ಮಾಸಿಸ್ಟ್ (Pharmacist) | 01 |
| | | ಸಬ್–ರಿಜಿಸ್ಟರ್ (Sub Registrars) | 26 |
| | | ಸ್ಪೆಷಲ್ ಗ್ಯಾಂಗ್‌ಮನ್ (Special Gangman) | 58 |
| | | ಎಂ.ಸಿ.ಗ್ಯಾಂಗ್‌ಮನ್ (M.C.Gangman) | 258 |
| | | ಎ.ಎಲ್.ಒ.ಗ್ಯಾಂಗ್‌ಮನ್ (ALO Gangman) | 268 |
| | | ಸೈನೋಪಿಸಿಸ್ ಗ್ಯಾಂಗ್‌ಮನ್ (Synopsis Gangman) | 06 |
| | | ಡಿಸ್‌ಇನ್ಫೆಕ್ಟೆಂಟ್ ಗ್ಯಾಂಗ್‌ಮನ್ (Disinfectant Gangman) | 13 |
| | | ಪ್ರೌಢಶಾಲಾ ಶಿಕ್ಷಕರು | 122 |
| | | ಪ್ರಾಥಮಿಕ ಶಿಕ್ಷಕರು | 90 |
| | | ನರ್ಸರಿ ಶಿಕ್ಷಕರು | 89 |
| 02 | ನಅಇ 373 ಎಂ.ಎನ್.ವೈ 2007 ದಿನಾಂಕ : 13–01–2010 | ಪೌರಕಾರ್ಮಿಕರು | 4000 |
| | | **ಒಟ್ಟು ಹುದ್ದೆಗಳ ಸಂಖ್ಯೆ** | **5024** |

ಮೇಲ್ಕಂಡಂತಹ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಿಕೊಳ್ಳಲು ನೇರ ನೇಮಕಾತಿ ಸಮಿತಿಯನ್ನು ರಚಿಸಬೇಕಾಗಿರುತ್ತದೆ. ಹಾಗೂ ಈ ಹಿಂದೆ 1997 ರಲ್ಲಿ ನಗರಪಾಲಿಕೆಯ ಪ್ರತಿನಿಧಿಗಳನ್ನೊಳಗೊಂಡಂತೆ ನೇಮಕಾತಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯ ಈ ಕೆಳಕಂಡಂತೆ ಅಧಿಕಾರಿ–ಸದಸ್ಯರು ಹಾಗೂ ಅಧಿಕಾರೇತರ–ಸದಸ್ಯರನ್ನೊಳಗೊಂಡಿತ್ತು.

## ಅಧಿಕಾರಿಗಳು – ಸದಸ್ಯರು

| | | |
|---|---|---|
| 01 | ಜಂಟಿ ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ. | ಅಧ್ಯಕ್ಷರು (ಚೇರ್‌ಮನ್) |
| 02 | ಉಪ ಆಯುಕ್ತರು (ಆಡಳಿತ), ಬೆಂಗಳೂರು ಮಹಾನಗರ ಪಾಲಿಕೆ. | ಮೆಂಬರ್ ಸೆಕ್ರೆಟರಿ |
| 03 | ಇಲಾಖಾ ಮುಖ್ಯಸ್ಥರು<br>(ನೇಮಕಾತಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ನೇಮಕಾತಿ ಸಮಿತಿಗೆ | ಸದಸ್ಯರು |

ಸದಸ್ಯರಾಗಬೇಕು).

| | | |
|---|---|---|
| 04 | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ. | ಸದಸ್ಯರು |



**ಅಧಿಕಾರೇತರ – ಸದಸ್ಯರು**

| | | |
|---|---|---|
| 01 | ಶ್ರೀಮತಿ. ಸರಳಾ ಪ್ರಕಾಶ್ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–71 |
| 02 | ಶ್ರೀಮತಿ. ವಿಜಯಲಕ್ಷ್ಮಿ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–68 |
| 03 | ಶ್ರೀಮತಿ. ಎಂ. ಜಹೀದಾ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–69 |
| 04 | ಶ್ರೀ. ಎಸ್. ಲೋಕೇಶ್ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–34 |
| 05 | ಶ್ರೀ. ಸಿ.ಎಸ್. ಸದಾಶಿವ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–49 |
| 06 | ಶ್ರೀ. ಡಿ.ಜಿ. ಕ್ರಿಸ್ಟೂಫರ್ ಚಕ್ರವರ್ತಿ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–25 |
| 07 | ಶ್ರೀ. ಎನ್. ಮಂಜುನಾಥ ರೆಡ್ಡಿ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–66 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಅನುಮೋದನೆ ನೀಡಿರುವ ಆರೋಗ್ಯ ಇಲಾಖೆ ಹಾಗೂ ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್–ಸಿ ಹಾಗು ಗ್ರೂಫ್–ಡಿ ಹುದ್ದೆಗಳನ್ನು ಆದಷ್ಟು ಬೇಗನೆ ನೇರ ನೇಮಕಾತಿಯಿಂದ ತುಂಬಿ ಕೊಳ್ಳಬೇಕಾಗಿರುತ್ತದೆ. ಆದುದರಿಂದ **ಈ ಕೆಳಂಡ ಅಧಿಕಾರಿ–ಸದಸ್ಯರನ್ನೊಳಗೊಂಡಂತೆ ಹಾಗೂ ಅಧಿಕಾರೇತರ ಸದಸ್ಯರನ್ನು ಆಯ್ಕೆಮಾಡಿ ನೇಮಕಾತಿ ಸಮಿತಿಯನ್ನು ರಚಿಸಬೇಕಾಗಿರುತ್ತದೆ.**

**ಅಧಿಕಾರಿ – ಸದಸ್ಯರು**

| | | |
|---|---|---|
| 01 | ಅಪರ ಆಯುಕ್ತರು (ಆಡಳಿತ). | ಅಧ್ಯಕ್ಷರು |
| 02 | ಉಪ ಆಯುಕ್ತರು (ಆಡಳಿತ). | ಸದಸ್ಯರು |
| 03 | ಸಹಾಯಕ ಆಯುಕ್ತರು ನೇಮಕಾತಿ & ವಿಚಾರಣೆ) | ಸದಸ್ಯ ಕಾರ್ಯದರ್ಶಿ |
| 04 | ಇಲಾಖಾ ಮುಖ್ಯಸ್ಥರು | ಸದಸ್ಯರು |
| 05 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಬೆಂಗಳೂರು ನಗರ ಜಿಲ್ಲೆ | ಸದಸ್ಯರು |

06 ಜಿಲ್ಲಾಧಿಕಾರಿ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ನಗರ — ಸದಸ್ಯರು

<u>**ಅಧಿಕಾರೇತರ – ಸದಸ್ಯರು**</u>

ನಗರಪಾಲಿಕೆಗೆ ಚುನಾಯಿತ ಪ್ರತಿನಿಧಿಗಳು ಆಯ್ಕೆಯಾಗಿರುವುದರಿಂದ 1997 ರಲ್ಲಿ ರಚನೆಯಾದ ನೇಮಕಾತಿ ಸಮಿತಿಯಂತೆ **07 ಮಂದಿ ಅಧಿಕಾರೇತರ ಸದಸ್ಯರನ್ನು ಆಯ್ಕೆ ಮಾಡಿ** ಹಾಗೂ ಮೇಲ್ಕಂಡ ಅಧಿಕಾರಿ–ಸದಸ್ಯರನ್ನೊಳಗೊಂಡಂತೆ **<u>ನೇಮಕಾತಿ ಸಮಿತಿಯನ್ನು ರಚಿಸುವಂತೆ ಕೋರಿ</u>** ಮಂಡಿಸಿರುವ ಟಿಪ್ಪಣಿ.

<u>ಣಯ</u> :- ಕಡತವನ್ನು ಪರಿಶೀಲಿಸಲಾಯಿತು ಮಾನ್ಯ ಆಯುಕ್ತರವರು ಮಂಡಿಸಿರುವ ಟಿಪ್ಪಣಿಯಲ್ಲಿ ಹಾಗೂ ಕಡತದಲ್ಲಿನ ದಾಖಲೆಗಳಲ್ಲಿ 1997ರಲ್ಲಿ ನಗರ ಪಾಲಿಕೆಯ ಪ್ರತಿನಿಧಿಗಳನ್ನೊಳಗೊಂಡಂತೆ ರಚಿಸಲಾಗಿದ್ದ ನೇಮಕಾತಿ ಸಮಿತಿಯಲ್ಲಿ ಜಂಟಿ ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ ರವರು ಅಧ್ಯಕ್ಷರಾಗಿರುವುದು ಕಂಡು ಬರುತ್ತದೆ. ಆದರೆ ಆ ಸಮಯದಲ್ಲಿ ರಚಿತವಾಗಿದ್ದ ನೇಮಕಾತಿ ಸಮಿತಿಯಲ್ಲಿ ಅಧಿಕಾರೇತರ ಸದಸ್ಯರು ಅಧ್ಯಕ್ಷರಾಗಿರುವುದು ತಿಳಿದು ಬಂದಿರುವ ಹಿನ್ನೆಲೆಯಲ್ಲಿ ಅಧ್ಯಕ್ಷರು ಅಧಿಕಾರಿ ಸದಸ್ಯರೇ ಅಥವಾ ಅಧಿಕಾರೇತರ ಸದಸ್ಯರೇ ಎಂಬುದನ್ನು ಮತ್ತೊಮ್ಮೆ ಪರಿಶೀಲಿಸಿ ಖಚಿತ ಪಡಿಸಿಕೊಂಡು ಸರಿಯಾದ ಮಾಹಿತಿಯೊಂದಿಗೆ ಹಾಗೂ ಪಾಲಿಕೆಯಲ್ಲಿ ಅಗತ್ಯವಿರುವ ಇನ್ನಿತರೆ ಹುದ್ದೆಗಳನ್ನು ಸೃಜಿಸಿ, ತುಂಬಲು ಸರ್ಕಾರದ ಅನುಮತಿ ಪಡೆಯುವ ಪ್ರಸ್ತಾವನೆಯೊಂದಿಗೆ ಪುನರ್ ಮಂಡಿಸಲು ಕಡತವನ್ನು ಹಿಂದಿರುಗಿಸುವುದೆಂದು ತೀರ್ಮಾನಿಸಲಾಯಿತು.



## <u>*04].ವಿಷಯದ ಸಂಖ್ಯೆ :–ತೆಲಿಸ್ಥಾಸ/09/2010–11*</u>

ಆಯುಕ್ತರವರ ಟಿಪ್ಪಣಿ ದಿನಾಂಕ : 22–07–2010. ರಲ್ಲಿ ವಿವರಿಸಿರುವಂತೆ ಸರ್ಕಾರದ ನಡವಳಿಯ ಆದೇಶ ಸಂಖ್ಯೆ : ಸಿಅಸುಇ22ಸೇಇವಿ, ದಿನಾಂಕ : 11–04–2008.ರ ನಡವಳಿಯ ಆದೇಶದಲ್ಲಿ ದಿನಾಂಕ 24–04–1998ರ ಆದೇಶ ಸಂಖ್ಯೆ : ಸಿಅಸು3ಸೇಇ 1996ರ ಕಂಡಿಕೆ 4(ಓ) ರಂತೆ ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ನೀಡಬಹುದಾದ ಸಂಭಾವನೆಯನ್ನು ಪ್ರಕರಣವೊಂದಕ್ಕೆ ರೂ. 6,000/– ಗಳಿಂದ ರೂ. 8,000/– (ಎಂಟು ಸಾವಿರ)ಗಳಿಗೆ ಹಾಗೂ ವಾಹನ ಭತ್ಯೆಯನ್ನು ರೂ. 1,000/– ರಿಂದ 1,500/– (ಒಂದು ಸಾವಿರದ ಐದು ನೂರು) ಗಳಿಗೆ ಹೆಚ್ಚಿಸಲು ಮಂಜೂರಾತಿ ನೀಡಲಾಗಿರುತ್ತದೆ. ಇದೇ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಚಾರಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ 6 ಮಂದಿ ನಿವೃತ್ತ ಜಿಲ್ಲಾ ನ್ಯಾಯಾಧೀಶರುಗಳಿಗೆ ಹಾಲಿ ನೀಡಲಾಗುತ್ತಿರುವ ಸಂಭಾವನೆಯನ್ನು ಪ್ರಕರಣವೊಂದಕ್ಕೆ ರೂ. 6,000/– ಗಳಿಂದ ರೂ. 8,000/– (ಎಂಟು ಸಾವಿರ)ಗಳಿಗೆ ಹಾಗೂ ವಾಹನ ಭತ್ಯೆಯನ್ನು ರೂ. 1,000/– ರಿಂದ 1,500/– (ಒಂದು ಸಾವಿರದ ಐದು ನೂರು)ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲು ಸಹಾಯಕ ಆಯುಕ್ತರು(ನೇಮಕಾತಿ & ವಿಚಾರಣೆ) ವಿಭಾಗ ರವರು ದಿನಾಂಕ 24–02–2010ರ ವರದಿಯಲ್ಲಿ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಹಾಲಿ ಪಾಲಿಕೆಯಲ್ಲಿ ವಿಚಾರಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರುಗಳ ಮಾಹಿತಿ | ಪ್ರಕರಣವೊಂದಕ್ಕೆ ಹಾಲಿ ಪಡೆಯುತ್ತಿರುವ ಸಂಭಾವನೆ | ಪಾಲಿಕೆಯಲ್ಲಿ ಯಾವ ವರ್ಷದಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ |
|---|---|---|---|
| 1 | ಶ್ರೀ. ಕೆ ಈಶ್ವರ್ ಭಟ್ ನಂ.1901 (ತುಷಾರ), ಜ್ಯುಡೀಶಿಯಲ್ ಲೇಔಟ್ ಪೋಸ್ಟ್, ಜಿ.ಕೆ.ವಿ.ಕೆ. 8ನೇ ಮೈನ್, ಯಲಹಂಕ, ಬೆ.55 | 6000/–ಬೆಳಚ್ಚು ಮಾಡಲು 50ರೂ. ಒಟ್ಟು ಒಂದು ಪ್ರಕರಣಕ್ಕೆ 6050ರೂ. | 2001–2002ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |

| | | | |
|---|---|---|---|
| 2 | ಕೆ.ನಾಗಯ್ಯ ಶೆಟ್ಟಿ ನಂ.613, ನಿಸರ್ಗ, ಬಿ.ಸಿ.ಸಿ ನೌಕರರ ವಸತಿ ಗೃಹ ಸೊಸೈಟಿ ಬಡಾವಣೆ, ಕನಕಪುರ ಮುಖ್ಯರಸ್ತೆ, ನಗುವನಹಳ್ಳಿ, ಬೆಂ.62 | 6000/– ಬೆರಳಚ್ಚು ಮಾಡಲು 50ರೂ ಒಟ್ಟು ಒಂದು ಪ್ರಕರಣಕ್ಕೆ 6050ರೂ. | 1997–98ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |
| 3 | ಕೆ. ರಾಮಕೃಷ್ಣ ಭಟ್ ಎಫ್–113, 4ಸಿ 4ನೇ ಮಹಡಿ, ಸೆಂಟ್ರಲ್ ಚೇಂಬರ್ಸ್, 2ನೇ ಮುಖ್ಯರಸ್ತೆ, ಗಾಂಧಿನಗರ, ಬೆ–9 | ಇದೂವರೆಗೂ ಸಂಭಾವನೆಯನ್ನು ಪಡೆದಿರುವುದಿಲ್ಲ ಕಾರಣ ಸರ್ಕಾರಿ ಆದೇಶದಂತೆ 8,000 ರೂ. ಗಳನ್ನು ನೀಡಲು ಕೋರಿರುತ್ತಾರೆ. | 2008–09ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |
| 04 | ಶ್ರೀ. ಎನ್. ಸುಬ್ಬರಾವ್, ನಂ.1033, 9ನೇ ಬಿ. ಮೈನ್ ಜ್ಯುಡೀಶಿಯಲ್ ಲೇಔಟ್ ಜಿ.ಕೆ.ವಿ.ಕೆ. ಪೋಸ್ಟ್, ಯಲಹಂಕ, ಬೆಂ–65 | ಇದೂವರೆಗೂ ಸಂಭಾವನೆಯನ್ನು ಪಡೆದಿರುವುದಿಲ್ಲ ಕಾರಣ ಸರ್ಕಾರಿ ಆದೇಶದಂತೆ 8,000 ರೂ. ಗಳನ್ನು ನೀಡಲು ಕೋರಿರುತ್ತಾರೆ. | 2008–09ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |
| 05 | ವಿ.ಪಿ.ಕೆದಿಲಾಮ. ನಂ. 45, ನೇ ಕ್ರಾಸ್, ಜ್ಯುಡೀಶಿಯಲ್ ಲೇಔಟ್ ಸಂಜಯ ನಗರ, ಬೆಂ–94. | ಇದೂವರೆಗೂ ಸಂಭಾವನೆಯನ್ನು ಪಡೆದಿರುವುದಿಲ್ಲ ಕಾರಣ ಸರ್ಕಾರಿ ಆದೇಶದಂತೆ 8,000 ರೂ. ಗಳನ್ನು ನೀಡಲು ಕೋರಿರುತ್ತಾರೆ. | 2008–09ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |
| 06 | ಶ್ರೀ. ರಾಮರಾವ್ ಕುಲಕರ್ಣಿ ನಂ.20/ಬಿ, 19ನೇ ಮೈನ್, 1ನೇ ಬ್ಲಾಕ್, ರಾಜಾಜಿನಗರ, ಬೆಂ–10 | 6000/– ಬೆರಳಚ್ಚು ಮಾಡಲು 50ರೂ. ಒಟ್ಟು ಒಂದು ಪ್ರಕರಣಕ್ಕೆ 6050ರೂ. | 2009–10ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಚಾರಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಮೇಲ್ಕಂಡ 6 ಮಂದಿ ನಿವೃತ್ತ ನ್ಯಾಯಾಧೀಶರುಗಳಿಗೆ ಸರ್ಕಾರದ ನಡವಳಿಯ ಆದೇಶ ಸಂಖ್ಯೆ : ಸಿಅಸುಇ22ಸೇಇವಿ, ದಿನಾಂಕ : 11–04–2008 ರಂತೆ ಹಾಲಿ ನೀಡಲಾಗುತ್ತಿರುವ ಸಂಭಾವನೆಯನ್ನು ಪ್ರಕರಣವೊಂದಕ್ಕೆ ರೂ. 6,000/– ಗಳಿಂದ ರೂ. 8,000/–(ಎಂಟು ಸಾವಿರ)ಗಳಿಗೆ ಹಾಗೂ ವಾಹನ ಭತ್ಯೆಯನ್ನು ರೂ. 1,000/– ರಿಂದ 1,500/–(ಒಂದು ಸಾವಿರದ ಐದು ನೂರು)ಗಳಿಗೆ ಹೆಚ್ಚಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಅನುಮೋದನೆ ಕೋರಿ ಮಂಡಿಸಿರುವ ಟಿಪ್ಪಣಿ.

<u>**ನಿರ್ಣಯ**</u> :- ಆಯುಕ್ತರವರ ದಿನಾಂಕ : 22-07-2010ರ ಟಿಪ್ಪಣಿಯನ್ನು ಒಪ್ಪಿದೆ.

## 05].ವಿಷಯದ ಸಂಖ್ಯೆ :–ತೆಆಸ್ಥಾಸ/10/2010–11

ಆಯುಕ್ತರವರ ಟಿಪ್ಪಣಿ ದಿನಾಂಕ : 29–07–2010. ರಲ್ಲಿ ವಿವರಿಸಿರುವಂತೆ, ಪಾಲಿಕೆಯ ಪಶ್ಚಿಮ ವಲಯದಲ್ಲಿ ಬರುವ ರಾಜಾಜಿನಗರ ವಾಣಿಜ್ಯ ಸಂಕೀರ್ಣದಲ್ಲಿ ನೆಮ್ಮದಿ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಖಾಲಿ ಜಾಗವನ್ನು ಘನ ಸರ್ಕಾರದ ಇ–ಗವರ್ನೆನ್ಸ್ ಇಲಾಖೆಗೆ ಹಸ್ತಾಂತರಿಸುವಂತೆ ಮಾನ್ಯ ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದ್ದು, ಅದರಂತೆ ಸ್ಥಳ ಪರಿಶೀಲನೆ ಮಾಡಲಾಗಿ ಸದರಿ ಸಂಕೀರ್ಣದಲ್ಲಿ ಬರುವ ಕೊಠಡಿ ಸಂಖ್ಯೆ:3 ಮತ್ತು 4ನ್ನು ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿಗೆ ಹಂಚಿಕೆ ಮಾಡಲಾಗಿದ್ದು, ಕೊಠಡಿ ಸಂಖ್ಯೆ:3ರಲ್ಲಿ ಆರೋಗ್ಯ ವೈದ್ಯಾಧಿಕಾರಿ ಮಹಾಲಕ್ಷ್ಮೀಪುರ ಮತ್ತು ಕೊಠಡಿ ಸಂಖ್ಯೆ:4ರಲ್ಲಿ ಆರೋಗ್ಯ ವೈದ್ಯಾಧಿಕಾರಿ ನಾಗಪುರ

ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಕೊಠಡಿ ಸಂಖ್ಯೆ:4ರಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಾಗಪುರ ವಲಯ ಕಛೇರಿಯನ್ನು ಮಹಾಲಕ್ಷ್ಮೀಪುರ ಕಛೇರಿಗೆ ಸ್ಥಳಾಂತರಿಸಿ ಈ ಕೊಠಡಿಯನ್ನು ನೆಮ್ಮದಿ ಕೇಂದ್ರ ಸ್ಥಾಪಿಸುವುದು ಸೂಕ್ತವಾಗಿ ಕಂಡುಬಂದಿದೆ.

ಆದ್ದರಿಂದ ರಾಜಾಜಿನಗರ ವಾಣಿಜ್ಯ ಸಂಕೀರ್ಣದಲ್ಲಿ ಬರುವ ಕೊಠಡಿ ಸಂಖ್ಯೆ:4ರಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಗಪುರ ಆರೋಗ್ಯ ವೈದ್ಯಾಧಿಕಾರಿ ಕಛೇರಿಯನ್ನು ಮಹಾಲಕ್ಷ್ಮೀಪುರ ಕಛೇರಿಗೆ ಸ್ಥಳಾಂತರಿಸಿ ಸುಮಾರು ಉತ್ತರ–ದಕ್ಷಿಣ 25ಅಡಿ ಪೂರ್ವ–ಪಶ್ಚಿಮ 18.5 ಅಡಿ ಅಳತೆಯುಳ್ಳ ಕೊಠಡಿ ಸಂಖ್ಯೆ:4 ಅನ್ನು ನೆಮ್ಮದಿ ಕೇಂದ್ರ ಸ್ಥಾಪಿಸಲು ಘನ ಸರ್ಕಾರದ ಇ–ಗವರ್ನೆನ್ಸ್ ಇಲಾಖೆಗೆ ಹಸ್ತಾಂತರಿಸುವ ಕುರಿತು ಸಭೆಯ ನಿರ್ಣಯಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ** :- ಆಯುಕ್ತರವರ ದಿನಾಂಕ : 31-07-2010ರ ಟಿಪ್ಪಣಿಯನ್ನು ಒಪ್ಪಿದೆ.

**06].ವಿಷಯದ ಸಂಖ್ಯೆ :–ತೆಆಸ್ಥಾಸ/11/2010–11**

ಆಯುಕ್ತರವರ ಟಿಪ್ಪಣಿ ದಿನಾಂಕ : 24–07–2010ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಸಂಖ್ಯೆಯನ್ನು ಹಾಗೂ ಬೀದಿನಾಯಿಗಳ ಹಾವಳಿ ನಿಯಂತ್ರಿಸುವ ಸಲುವಾಗಿ ಹನ್ನೆರಡು ಪ್ಯಾಕೇಜುಗಳಲ್ಲಿ ಎಬಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಬೀದಿನಾಯಿಗಳ ಹಾವಳಿ ಬಗ್ಗೆ ಹೆಚ್ಚಿನ ಸಂಖ್ಯೆಯ ದೂರುಗಳು ದಾಖಲಾಗುತ್ತಿರುವ ಪೂರ್ವ ಮತ್ತು ದಕ್ಷಿಣ ವಲಯಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ಘಟಕ–ಕಂ–ಸಂಚಾರಿ



ಶಸ್ತ್ರಚಿಕಿತ್ಸಾ ಘಟಕಗಳನ್ನು ಟೆಂಡರ್ ಸಂಖ್ಯೆ:ಜೆಡಿ(ಎಹೆಚ್):ಎಬಿಸಿ: ಎಆರ್‌ವಿ:ಟೆಂಡರ್:ಪೀಆರ್:867:2009–10, ದಿ:24.02.2010ರಂತೆ ಈ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದ್ದು, ಈ ಟೆಂಡರ್‌ನಲ್ಲಿ ಅಳವಡಿಸಲಾದ ವಿಶೇಷ ಷರತ್ತು ಮತ್ತು ನಿಭಂದನೆಗಳು ಈ ಕೆಳಕಂಡಂತಿವೆ:

**ಎಬಿಸಿ–ಎಆರ್‌ವಿ ಪ್ಯಾಕೇಜ್‌ನ ಪ್ರಮುಖ ಷರತ್ತು ಮತ್ತು ನಿಭಂದನೆಗಳು.**

1. ಫೀಲ್ಡ್ ಕ್ಲಿನಿಕ್‌ನ ವ್ಯವಸ್ಥೆ ಟೆಂಡರ್‌ದಾರರೇ ಮಾಡಿಕೊಳ್ಳುವುದು.
2. ನಾಯಿ ಹಿಡಿಯುವ ವಾಹನದ ವ್ಯವಸ್ಥೆಯನ್ನು ಟೆಂಡರ್ದಾರರೇ ಮಾಡಿಕೊಳ್ಳುವುದು.
3. ದಯಾಮರಣಕ್ಕೊಳಗಾದ ನಾಯಿಗಳ ವಿಲೇವಾರಿ ಟೆಂಡರ್‌ದಾರರೇ ಮಾಡಿಕೊಳ್ಳುವುದು.
4. ಪ್ರತಿ ಪ್ಯಾಕೇಜ್‌ನಲ್ಲಿ ಪ್ರತ್ಯೇಕವಾಗಿ 12 ಗಂಟೆಗಳ ಕಾಲ ಸಹಾಯವಾಣಿಯನ್ನು ಕಡ್ಡಾಯ ವಾಗಿ ನಿರ್ವಹಿಸುವುದು.
5. ತುರ್ತು ಶ್ವಾನದಳದವರನ್ನು ಪಾಳಿಯ ಮೇಲೆ ಮಧ್ಯಾಹ್ನ 3.00 ರಿಂದ ಸಂಜೆ 6.00 ರವರೆಗೆ ಕೇಂದ್ರ ನಿಯಂತ್ರಣ ಕೊಠಡಿಯಲ್ಲಿ ನಿರ್ವಹಿಸುವುದು.
6. ಪ್ಯಾಕೇಜ್‌ನಲ್ಲಿ 7 ಅಥವ 8 ವಾರ್ಡ್‌ಗಳಿಗಿಂತ ಅಧಿಕವಿದ್ದಲ್ಲಿ ಪ್ರತ್ಯೇಕವಾಗಿ ಎರಡು ಶ್ವಾನ ದಳಗಳನ್ನು ವಾಹನಗಳೊಂದಿಗೆ ಹೊಂದಿರತಕ್ಕದ್ದು.

*ಕ್ರಮಸಂಖ್ಯೆ–1,2,3ಕ್ಕೆ ಸಂಬಂಧಿಸಿದಂತೆ ಸಾಧ್ಯವಿರುವಲ್ಲಿ ಪಾಲಿಕೆಯಿಂದಲೇ ಸದರಿ ವ್ಯವಸ್ಥೆ ಗಳನ್ನು ಮಾಡಲಾಗುವುದು.

## ಕ್ಷಿಪ್ರಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸಾ ಘಟಕ ಷರತ್ತುಗಳು (ವಲಯಗಳು–ಪೂರ್ವಮತ್ತು ದಕ್ಷಿಣ)

1. ಫೀಲ್ಡ್ ಕ್ಲಿನಿಕ್‌ನ ವ್ಯವಸ್ಥೆ ಟೆಂಡರ್‌ದಾರರೇ ಮಾಡಿಕೊಳ್ಳುವುದು.
2. ನಾಯಿ ಹಿಡಿಯುವ ವಾಹನದ ವ್ಯವಸ್ಥೆಯನ್ನು ಟೆಂಡರ್‌ದಾರರೆ ಮಾಡಿಕೊಳ್ಳುವುದು.
3. ದಯಾಮರಣಕ್ಕೊಳಗಾದ ನಾಯಿಗಳ ವಿಲೇವಾರಿ ಟೆಂಡರ್‌ದಾರರೇ ಮಾಡಿಕೊಳ್ಳುವುದು.
4. ಪ್ರತಿ ಪ್ಯಾಕೇಜ್‌ನಲ್ಲಿ ಪ್ರತ್ಯೇಕವಾಗಿ 12 ಗಂಟೆಗಳ ಕಾಲ ಸಹಾಯವಾಣಿಯನ್ನು ಕಡ್ಡಾಯ ವಾಗಿ ನಿರ್ವಹಿಸುವುದು ಮತ್ತು ಸಾರ್ವಜನಿಕರ ದೂರುಗಳಿಗೆ ಕೂಡಲೇ ಸ್ಪಂದಿಸಿ ಕ್ರಮ ಕೈ ಗೊಳ್ಳುವುದು.
5. ಕೊಳಚೆ ಪ್ರದೇಶ ಮತ್ತು ಘನತ್ಯಾಜ್ಯ ವಿಲೇವಾರಿ ಪ್ರದೇಶಗಳಲ್ಲಿ ಸಂಚಾರಿ ಶಸ್ತ್ರಚಿಕಿತ್ಸಾ ಘಟಕಗಳನ್ನು ಬಳಸಿ ಸ್ಥಳದಲ್ಲಿಯೇ ಶಸ್ತ್ರಚಿಕಿತ್ಸೆ ಮಾಡುವುದು.
6. ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ಪ್ರತ್ಯೇಕವಾಗಿ ವಾಹನ ಸಹಿತ ಶ್ವಾನದಳವನ್ನು ಹೊಂದಿರತಕ್ಕದ್ದು.

ಸದರಿ ಟೆಂಡರ್‌ನಲ್ಲಿ ಪ್ಯಾಕೇಜ್–2ಕ್ಕೆ ಮೆ: ಕರುಣ ಸಂಸ್ಥೆಯವರು ಮಾತ್ರ ಬಿಡ್ ಸಲ್ಲಿಸಿರುತ್ತಾರೆ. ಮೆ: ಕರುಣ ಸಂಸ್ಥೆಯವರು ಸಲ್ಲಿಸಿದ ಬಿಡ್ ದರ ಈ ಕೆಳಗಿನಂತಿರುತ್ತದೆ:

| ವಿವರ | ಗಂಡು ನಾಯಿ | ಹೆಣ್ಣು ನಾಯಿ |
|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ. 615.00** | **ರೂ. 650.00** |
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | **ರೂ. 60.00** | **ರೂ. 60.00** |
| ದಯಾಮರಣಕ್ಕೆ ಒಳಪಡಿಸಿರುವುದು. | **ರೂ. 100.00** | **ರೂ. 100.00** |



ಮೆ: ಕರುಣಾ ಸಂಸ್ಥೆಯವರು ಟೆಂಡರ್‌ನ ಕೆಲವು ಷರತ್ತು ಮತ್ತು ನಿಭಂದನೆಗಳಿಗೆ ಒಪ್ಪದೆ ತಮ್ಮದೆ ಆದ ಕೆಲವು ಷರತ್ತು ಮತ್ತು ನಿಭಂದನೆಗಳನ್ನು ನಮೂದಿಸಿದ್ದ ಕಾರಣ ಸದರಿ ಸಂಸ್ಥೆಯನ್ನು ದಿ:19.04.2010ರಂದು ದರ–ಸಂಧಾನಕ್ಕೆ ಆಹ್ವಾನಿಸಿ, ದರ–ಸಂಧಾನ ಸಭೆಯಲ್ಲಿ ಚರ್ಚಿಸಿ ಕರುಣ ಸಂಸ್ಥೆಯವರು ಹಳೆಯ ಟೆಂಡರ್‌ನ ಷರತ್ತು ಮತ್ತು ನಿಭಂದನೆಗಳಂತೆ ಈ ಕೆಳಗಿನ ದರಗಳಿಗೆ ಒಪ್ಪಿರುತ್ತಾರೆ ಹಾಗೂ ಬೇರೆ **ಎನ್‌ಜಿಓ**ಗಳಿಗೆ ಹೆಚ್ಚಿನ ದರ ನಿಗದಿಪಡಿಸಿದಲ್ಲಿ ಆ ದರವನ್ನೆ ತಮಗೂ ನೀಡಬೇಕಾಗಿ ಕೋರಿರುತ್ತಾರೆ.

| ವಿವರ | ಗಂಡು ನಾಯಿ | ಹೆಣ್ಣು ನಾಯಿ |
|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ.515.00** | **ರೂ.525.00** |

| | | |
|---|---|---|
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | **ರೂ. 50.00** | **ರೂ. 50.00** |
| ದಯಾಮರಣಕ್ಕೆ ಒಳಪಡಿಸಿರುವುದು. | **ರೂ. 75.00** | **ರೂ. 75.00** |

ಉಳಿದ ಹನ್ನೊಂದು ಪ್ಯಾಕೇಜ್ ಹಾಗೂ ಎರಡು ಕ್ಷಿಪ್ರ ಕಾರ್ಯಾಚರಣೆ–ಕಮ್–ಸಂಚಾರಿ ಶಸ್ತ್ರಚಿಕಿತ್ಸೆ ಘಟಕಗಳಿಗೆ ಅಲ್ಪಾವಧಿ ಟೆಂಡರ್‌ನ ಎರಡನೆ ಕರೆಯನ್ನು ಈ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿ:13.04.2010ರಂದು ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಆರು ಪ್ರಾಣಿ ಕಲ್ಯಾಣ ಸಂಸ್ಥೆಗಳು ಹಾಗೂ ಒಬ್ಬರು ಪಶುವೈದ್ಯರು ಭಾಗವಹಿಸಿದ್ದು, ಸದರಿ ಟೆಂಡರ್‌ದಾರರು ಟೆಂಡರ್‌ನಲ್ಲಿ ನಮೂದಿಸಿರುವ ಗರಿಷ್ಠ ಹಾಗೂ ಕನಿಷ್ಠ ದರಗಳು ಈ ಕೆಳಗಿನಂತಿವೆ:

| ವಿವರ | ಗಂಡು ನಾಯಿ | | ಹೆಣ್ಣು ನಾಯಿ | |
|---|---|---|---|---|
| **(ಏಬಿಸಿ–ಏಆರ್‌ವಿ ಪ್ಯಾಕೇಜುಗಳಿಗೆ)** | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ 960** | **ರೂ 750** | **ರೂ.960** | **ರೂ 800** |
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | **ರೂ 190** | **ರೂ 150** | **ರೂ 190** | **ರೂ 150** |
| ದಯಾಮರಣಕ್ಕೆ ಒಳಪಡಿಸಿರುವುದು. | **ರೂ 90** | **ರೂ 80** | **ರೂ 90** | **ರೂ 80** |

| ವಿವರ | ಗಂಡು ನಾಯಿ | | ಹೆಣ್ಣು ನಾಯಿ | |
|---|---|---|---|---|
| **(ಕ್ಷಿಪ್ರಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸಾ ಘಟಕ)** | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ 1200** | **ರೂ 900** | **ರೂ 1200** | **ರೂ 995** |
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | **ರೂ 190** | **ರೂ 170** | **ರೂ 190** | **ರೂ 170** |
| ದಯಾಮರಣಕ್ಕೆ ಒಳಪಡಿಸಿರುವುದು. | **ರೂ 100** | **ರೂ 80** | **ರೂ 100** | **ರೂ 80** |

ಏಬಿಸಿ–ಏಆರ್‌ವಿ ಪ್ಯಾಕೇಜ್ ಹಾಗೂ ಕ್ಷಿಪ್ರಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸಾ ಘಟಕಗಳಿಗೆ ಪ್ರತ್ಯೇಕವಾಗಿ ಏಕರೂಪದ ದರ ನಿಗದಿಪಡಿಸುವ ಸಲುವಾಗಿ ಅಪರ ಆಯುಕ್ತರು **(ಆರೋಗ್ಯ)**,ಇವರ ಅಧ್ಯಕ್ಷತೆಯಲ್ಲಿ ದರ ಸಂಧಾನ ಸಭೆಯನ್ನು ಕರೆದು, ಈ ಕೆಳಗಿನಂತೆ ಏಕರೂಪದ ದರಗಳನ್ನು ನಿಗದಿಪಡಿಸಲು ಟೆಂಡರ್‌ದಾರರು ತಮ್ಮ ಒಪ್ಪಿಗೆ ಸೂಚಿಸಿರುತ್ತಾರೆ.

| ವಿವರ (ಎಬಿಸಿ–ಎಆರ್‌ವಿ ಪ್ಯಾಕೇಜುಗಳಿಗೆ) | ಫೀಲ್ಡ್–ಕ್ಲಿನಿಕ್ ಮತ್ತು ವಾಹನ ಒದಗಿಸದಿದ್ದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಅಥವ ವಾಹನ ಒದಗಿಸಿದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಮತ್ತು ವಾಹನ ಒದಗಿಸಿದಲ್ಲಿ ಪ್ರತಿನಾಯಿಗೆ |
|---|---|---|---|
| ಸಂತಾನಹರಣ ಶಸ್ತ್ರ್ಯಚಿಕಿತ್ಸೆ ಮತ್ತು ಎಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ 680** | **ರೂ 650** | **ರೂ 600** |
| ಪುನರಾವರ್ತಿತ ಎಆರ್‌ವಿ(ಎಆರ್‌ವಿ ಡ್ರೈವ್) | **ರೂ 90** | **ರೂ 90** | **ರೂ 90** |
| ದಯಾಮರಣಕ್ಕೆ ಒಳಪಡಿಸಿರುವುದು. | **ರೂ 75** | **ರೂ 75** | **ರೂ 75** |

| ವಿವರ (ಕ್ಷಿಪ್ರಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸೆ ಘಟಕ) | ಫೀಲ್ಡ್–ಕ್ಲಿನಿಕ್ ಒದಗಿಸದಿದ್ದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಒದಗಿಸಿದಲ್ಲಿ ಪ್ರತಿನಾಯಿಗೆ |
|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಎಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ 850** | **ರೂ 800** |
| ಪುನರಾವರ್ತಿತ ಎಆರ್‌ವಿ(ಎಆರ್‌ವಿ ಡ್ರೈವ್) | **ರೂ 90** | **ರೂ 90** |
| ದಯಾಮರಣಕ್ಕೆ ಒಳಪಡಿಸಿರುವುದು. | **ರೂ 75** | **ರೂ 75** |

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಂಟು ಎಬಿಸಿ–ಎಆರ್‌ವಿ ಪ್ಯಾಕೇಜುಗಳಿಗೆ ಈ ಹಿಂದೆ ಟೆಂಡರ್ ಕರೆದು, ಈ ಕೆಳಗಿನಂತೆ ದರಗಳನ್ನು ನಿಗದಿಗೊಳಿಸಲಾಗಿರುತ್ತದೆ. ಈ ದರಗಳು ಸೆಪ್ಟಂಬರ್–2009 ರಿಂದ ಆಗಸ್ಟ್–2011ರವರೆಗೆ ಚಾಲ್ತಿಯಲ್ಲಿರುತ್ತದೆ.

| ವಿವರ (ಎಬಿಸಿ–ಎಆರ್‌ವಿ ಪ್ಯಾಕೇಜುಗಳಿಗೆ) | ಗಂಡು ನಾಯಿ | ಹೆಣ್ಣು ನಾಯಿ |
|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಎಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ | **ರೂ 515** | **ರೂ 525** |

| | | |
|---|---|---|
| ಪದ್ಧತಿಯಲ್ಲಿ) | | |
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | ರೂ 50 | ರೂ 50 |
| ದಯಾಮರಣಕ್ಕೆ ಒಳಪಡಿಸಿರುವುದು. | ರೂ 75 | ರೂ 75 |

ಹಿಂದಿನ ಟೆಂಡರ್‌ನಲ್ಲಿ ನಿಗದಿಯಾಗಿದ್ದ ದರಗಳಿಗೂ ಹಾಗೂ ಪ್ರಸ್ತುತ ಕರೆಯಲಾಗಿರುವ ಟೆಂಡರ್‌ನಲ್ಲಿ ಪ್ರಾಣಿ ಕಲ್ಯಾಣ ಸಂಸ್ಥೆಗಳು ಒಪ್ಪಿರುವ ದರಗಳಿಗೂ ಹೆಚ್ಚಿನ ವ್ಯತ್ಯಾಸ ಕಂಡು ಬಂದುದರಿಂದ ಪ್ರಾಣಿಕಲ್ಯಾಣ ಸಂಸ್ಥೆಗಳು ದರ–ಸಂಧಾನ ಸಮಯದಲ್ಲಿ ಒಪ್ಪಿರುವ ದರಗಳನ್ನು ಕಡಿತಗೊಳಿಸಿ ಈ ಕೆಳಗಿನಂತೆ ದರ–ನಿಗದಿಪಡಿಸಬಹುದೆಂದು ಜಂಟಿ ನಿರ್ದೇಶಕರು (ಪಶುಪಾಲನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.



| ವಿವರ<br>**(ಏಬಿಸಿ–ಏಆರ್‌ವಿ ಪ್ಯಾಕೇಜುಗಳಿಗೆ)** | ಫೀಲ್ಡ್–ಕ್ಲಿನಿಕ್ ಮತ್ತು ವಾಹನ ಒದಗಿಸದಿದ್ದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಅಥವ ವಾಹನ ಒದಗಿಸಿದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಮತ್ತು ವಾಹನ ಒದಗಿಸಿದಲ್ಲಿ ಪ್ರತಿನಾಯಿಗೆ |
|---|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ. 650** | **ರೂ. 600** | **ರೂ. 550** |
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | **ರೂ.** 70 | **ರೂ.** 70 | **ರೂ.** 70 |
| ದಯಾಮರಣಕ್ಕೆ ಒಳಪಡಿಸಿರುವುದು. | **ರೂ.** 75 | **ರೂ.** 75 | **ರೂ.** 75 |

| ವಿವರ<br>**(ಕ್ಷಿಪ್ರಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸೆ ಘಟಕ)** | ಫೀಲ್ಡ್–ಕ್ಲಿನಿಕ್ ಒದಗಿಸದಿದ್ದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಒದಗಿಸಿದಲ್ಲಿ ಪ್ರತಿನಾಯಿಗೆ |
|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | **ರೂ** 700 | **ರೂ** 650 |

| | | |
|---|---|---|
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | ರೂ 70 | ರೂ 70 |
| ದಯಾಮರಣಕ್ಕೆ ಒಳಪಡಿಸಿರುವುದು. | ರೂ 75 | ರೂ 75 |

ಕ್ಷಿಪ್ರ ಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸೆ ಘಟಕವನ್ನು ಬೆಂಗಳೂರು ದಕ್ಷಿಣ, ಪೂರ್ವವಲಯಗಳಲ್ಲದೆ ಪಶ್ಚಿಮವಲಯಕ್ಕೂ ಸಹ ವಿಸ್ತರಿಸಬಹುದಾಗಿದ್ದು, ಸದರಿ ಘಟಕದಲ್ಲಿ ಒಂದು ವಿಧಾನಸಭಾ ಕ್ಷೇತ್ರಕ್ಕೆ ಒಂದು ಬೀದಿನಾಯಿ ಹಿಡಿಯುವ ದಳದ ಬದಲು ಎರಡು ವಿಧಾನಸಭಾ ಕ್ಷೇತ್ರಕ್ಕೆ ಒಂದು ಬೀದಿನಾಯಿ ಹಿಡಿಯುವ ದಳವನ್ನು ಹೊಂದಬಹುದಾಗಿರುತ್ತದೆ ಎಂದೂ ಸಹ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಬೀದಿನಾಯಿಗಳ ಸಂತಾನ ನಿಯಂತ್ರಣ ಕಾರ್ಯವನ್ನು ಏಬಿಸಿ(ಡಾಗ್) ನಿಯಮಗಳು–2001ರ ಅನ್ವಯ ಸಾರ್ವಜನಿಕ ಹಿತದೃಷ್ಠಿಯಿಂದ ಆದ್ಯತೆಯ ಮೇಲೆ ಅನಿಮಲ್ ಬರ್ತ್ ಕಂಟ್ರೋಲ್–ಆ್ಯಂಟಿ–ರೇಬಿಸ್ ಚುಚ್ಚುಮದ್ದು ಹಾಕುವ ಕಾರ್ಯಕ್ರಮವನ್ನು ವಿಳಂಬವಿಲ್ಲದೆ ಕೈಗೊಳ್ಳ ಬೇಕಾಗಿರುವುದರಿಂದ ಈ ಕೆಳಗೆ ನಮೂದಿಸಿರುವ ದರಗಳಿಗೆ ಅನುಮೋದನೆ ನೀಡಲು ಕೋರಿ ನಿವೇದಿಸಲಾಗಿದೆ.

**ಪ್ಯಾಕೇಜ್–2 ಕ್ಕೆ**

| ವಿವರ | ಗಂಡುನಾಯಿ | ಹೆಣ್ಣು ನಾಯಿ |
|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | ರೂ. 515 | ರೂ. 525 |
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | ರೂ. 50 | ರೂ. 50 |
| ದಯಾಮರಣಕ್ಕೆ ಒಳಪಡಿಸಿರುವುದು. | ರೂ. 75 | ರೂ. 75 |



**<u>ಪ್ಯಾಕೇಜ್–3,4,5,6,7–ಏ,10,10–ಏ, ಬೊಮ್ಮನ ಹಳ್ಳಿ–ಏ,ಮಹದೇವಪುರ–ಏ,ಆರ್‌ಆರ್‌ನಗರ–ಏ ಹಾಗೂ ಯಲಹಂಕಗಳಿಗೆ:</u>**

| ವಿವರ (ಏಬಿಸಿ–ಏಆರ್‌ವಿ ಪ್ಯಾಕೇಜುಗಳಿಗೆ) | ಫೀಲ್ಡ್–ಕ್ಲಿನಿಕ್ ಮತ್ತು ವಾಹನ ಒದಗಿಸದಿದ್ದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಅಥವ ವಾಹನ ಒದಗಿಸಿದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಮತ್ತು ವಾಹನ ಒದಗಿಸಿದಲ್ಲಿ ಪ್ರತಿನಾಯಿಗೆ |
|---|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ | ರೂ 650 | ರೂ 600 | ರೂ 550 |

ಪದ್ಧತಿಯಲ್ಲಿ)

| | | | |
|---|---|---|---|
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | ರೂ 70 | ರೂ 70 | ರೂ 70 |
| ದಯಾಮರಣಕ್ಕೆ ಒಳಪಡಿಸಿರುವುದು. | ರೂ 75 | ರೂ 75 | ರೂ 75 |

**<u>ಪ್ಯಾಕೇಜ್–ಕ್ಷಿಪ್ರ ಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸಾ ಘಟಕ–ಪೂರ್ವ, ದಕ್ಷಿಣ ಹಾಗೂ ಪಶ್ಚಿಮ ವಲಯಗಳಿಗೆ:</u>**

| ವಿವರ<br>**(ಕ್ಷಿಪ್ರಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರಚಿಕಿತ್ಸೆ ಘಟಕ)** | ಫೀಲ್ಡ್–ಕ್ಲಿನಿಕ್ ಒದಗಿಸದಿದ್ದಲ್ಲಿ ಪ್ರತಿನಾಯಿಗೆ | ಫೀಲ್ಡ್–ಕ್ಲಿನಿಕ್ ಒದಗಿಸಿದಲ್ಲಿ ಪ್ರತಿನಾಯಿಗೆ |
|---|---|---|
| ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಏಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | ರೂ 700 | ರೂ 650 |
| ಪುನರಾವರ್ತಿತ ಏಆರ್‌ವಿ(ಏಆರ್‌ವಿ ಡ್ರೈವ್) | ರೂ 70 | ರೂ 70 |
| ದಯಾಮರಣಕ್ಕೆ ಒಳಪಡಿಸಿರುವುದು. | ರೂ 75 | ರೂ 75 |

**ಏಬಿಸಿ–ಏಆರ್‌ವಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು,**

**ಲೆಕ್ಕಶೀರ್ಷಿಕೆ–13 ಆರೋಗ್ಯ ಸಾಮಾನ್ಯ –ಆರೋಗ್ಯ**

**ಮತ್ತು ನೈರ್ಮಲ್ಯೀಕರಣ ಪ್ರಾಣಿ ಸಂಖ್ಯೆ ನಿಯಂತ್ರಣ**

**ವೆಚ್ಚಗಳು ಬೀದಿನಾಯಿಗಳ ನಿರ್ವಹಣೆ ವೆಚ್ಚಗಳು**

**(ಪಿ–0273) ಅಡಿಯಲ್ಲಿ ಭರಿಸಲಾಗುವುದು.**

2010–11 ನೇ ಸಾಲಿನ ಆಯ–ವ್ಯಯ ಅಂದಾಜಿನಲ್ಲಿ ಸದರಿ ಶೀರ್ಷಿಕೆಯಲ್ಲಿ ರೂ.720.00 ಲಕ್ಷಗಳಿಗೆ ಅಂದಾಜು ಆಯ–ವ್ಯಯ ವಿವರವನ್ನು ಪ್ರಸ್ತಾಪಿಸಲಾಗಿದೆ ಎಂದು ನಿವೇದಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ</u> :- ಆಯುಕ್ತರವರ ದಿನಾಂಕ : 24-07-2010ರ ಟಿಪ್ಪಣಿಯನ್ನು ಒಪ್ಪಿದೆ.

**07].ವಿಷಯದ ಸಂಖ್ಯೆ :–ತೆಆಸ್ಥಾಸ/12/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಉಆ(ಜಾ)ಪಿಆರ್/34/09–10, ದಿನಾಂಕ:17–07–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಿ.ಓ.ಟಿ ಆಧಾರದಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ಎದುರಿಗೆ 648 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ವ್ಯಕ್ತಿಗಳಿಂದ/ಸಂಸ್ಥೆಗಳಿಂದ ಉಪ ಆಯುಕ್ತರು (ಜಾಹೀರಾತು) ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ : EE(M)Tennd/02/09-10 ದಿನಾಂಕ : 22–10–2009 ಮತ್ತು 09–11–2009 ಗಳಂದು

ಆಹ್ವಾನಿಸಲಾಗಿರುತ್ತದೆ. ಆದರೆ ಸದರಿ ಟೆಂಡರ್‌ನಲ್ಲಿ ಯಾವುದೇ ಸಂಸ್ಥೆಗಳು ಬಾಗವಹಿಸಿರುವುದಿಲ್ಲ. ಹಾಗೂ ಸದರಿ ಟೆಂಡರ್‌ನ RFP Document Sl.No.15.6 ರಂತೆ In case no response is received from any bidder for particular toilet location any other interested persons/ institutions will be considered on "FIRST COME FIRST SERVE BASIS SEPERATELY" ಎಂದು ಷರತ್ತನ್ನು ವಿಧಿಸಲಾಗಿರುತ್ತದೆ. ಅದರಂತೆ ಮೆ॥ಸರ್ವ್ ಅಂಡ್ ವ್ಯಾಲಿಅಡ್ವರ್‌ಟೈಸಿಂಗ್ ಸಂಸ್ಥೆಯವರು ದಿನಾಂಕ:03–11–2009 ಮತ್ತು ದಿನಾಂಕ:23–11–2009 ರಂದು ಮನವಿ ಪತ್ರವನ್ನು ಸಲ್ಲಿಸಿ 30 ಸ್ಥಳಗಳಲ್ಲಿ ಬಿ.ಓ.ಟಿ ಆಧಾರದ ಮೇಲೆ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು ಸಿದ್ದರಿರುವುದಾಗಿ ತಿಳಿಸಿ, ಒಟ್ಟು 30ವರ್ಷಗಳ ಕಾಲಾವಧಿಯನ್ನು ನೀಡಲು ಕೋರಿರುತ್ತಾರೆ.

RFP Document Sl.No.15.6 ರಂತೆ ಮೆ॥ಸರ್ವ್ ಅಂಡ್ ವ್ಯಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್ ಸಂಸ್ಥೆಯವರು ಮನವಿಯನ್ನು ಸಲ್ಲಸಿರುವ ಹಿನ್ನೆಲೆಯಲ್ಲಿ, ಸದರಿ ಸಂಸ್ಥೆಯವರಿಗೆ ಒಟ್ಟು 7 ವರ್ಷಗಳ ಕಾಲಾವಧಿಗೆ ಒಟ್ಟು 30 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲು ತೀರ್ಮಾನಿಸಲಾಗಿರುತ್ತದೆ.

ಷರತ್ತುಗಳು:–

1. ಪ್ರತಿ ಶೌಚಾಲಯಕ್ಕೆ ವಾರ್ಷಿಕವಾಗಿ ರೂ.50,000/–ಗಳಂತೆ ಲೈಸನ್ಸ್ ಶುಲ್ಕವನ್ನು ಪಾವತಿಸುವುದು.
2. ಪಾಲಿಕೆಯು ನಿಗಧಿಪಡಿಸಿರುವ ಶುಲ್ಕವನ್ನು ಸಾರ್ವಜನಿಕರಿಂದ ವಸೂಲಿ ಮಾಡತಕ್ಕದ್ದು.
3. ಬಿ.ಓ.ಟಿ ಆಧಾರದ ಟೆಂಡರ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಶೌಚಾಲಯಗಳ ಮೇಲೆ ಪಾಲಿಕೆಯು ಅನುಮೋದಿಸಿದ ನಕ್ಷೆಗೆ ಅನುಸಾರವಾಗಿ 300 ಚದರ ಅಡಿಗಳಿಗೆ ಮೀರದಂತೆ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸುವುದು.
5. ಜಾಹೀರಾತು ಬೈಲಾಗಳು–2006ರಂತೆ ಜಾಹೀರಾತು ತೆರಿಗೆಯನ್ನು ನಿಯಮಾನುಸಾರ ಪಾವತಿಸುವುದು ಮತ್ತು ಬೈಲಾ ನಿಯಮಗಳಿಗೆ ಬದ್ದರಾಗಿರತಕ್ಕದ್ದು.
6. ಶೌಚಾಲಯಗಳನ್ನು ನಿರ್ಮಿಸುವ ಮೊದಲು ಪಾಲಿಕೆಯ ತಾಂತ್ರಿಕ ವಿಭಾಗದಿಂದ ಶೌಚಾಲಯದ ನಕ್ಷೆಯನ್ನು ಸಲ್ಲಿಸಿ ಅನುಮೋದಿಸಿಕೊಡುವುದು.
7. ಶೌಚಾಲಯಗಳ ನಿರ್ಮಾಣಗಳ ಸ್ಥಳಗಳಲ್ಲಿ ನೀರಿನ ಸರಬರಾಜಿಗಾಗಿ ಬೋರ್‌ವೇಲ್‌ಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರುತಕ್ಕದ್ದು.
8. ಶೌಚಾಲಯಗಳನ್ನು ನಿರ್ಮಿಸುವ ಸ್ಥಳಗಳನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರಿಂದ ಗುರುತಿಸಿಕೊಂಡು ಇವರ ಉಸ್ತುವಾರಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು.
9. ದಿನಾಂಕ : 09–11–2009ರ ಟೆಂಡರ್ ಪ್ರಕಟಣೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

10. ಅನುಮತಿ ಅವಧಿ ಮುಗಿದ ನಂತರ ನಿರ್ಮಿಸಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸುವುದು.



ಈ ಮೇಲಿನ ಷರತ್ತುಗಳ ಅನ್ವಯ ಸಾರ್ವಜನಿಕ ಶೌಚಾಲಯಗಳನ್ನು ಜಾಹೀರಾತು ಹಕ್ಕುಗಳ ಎದುರಿಗೆ ಬಿ.ಓ.ಟಿ ಆಧಾರದಲ್ಲಿ ಒಟ್ಟು 30 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಮೆ॥ಸರ್ವ್ ಅಂಡ್ ವ್ಯಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ಒಟ್ಟು 7 ವರ್ಷಗಳ ಕಾಲಾವಧಿಗೆ ಅನುಮತಿ ನೀಡಲು ಹಾಗೂ ಅನುಮತಿ ಅವಧಿ ಮುಗಿದ ನಂತರ ಉತ್ತಮ ಸ್ಥಿತಿಯಲ್ಲಿ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರದ ಅನಮೋದನೆ ಪಡೆಯಲು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ</u>** :- ಆಯುಕ್ತರವರ ದಿನಾಂಕ : 02-08-2010ರ ಟಿಪ್ಪಣಿಯನ್ನು ಒಪ್ಪಿದೆ.

## <u>08].ವಿಷಯದ ಸಂಖ್ಯೆ :–ತೆಆಸ್ಥಾಸ/13/2010–11</u>

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಮು.ಲೆ.ಅ/ಆಯವ್ಯಯ/ಪಿಆರ್/01/2010–11, ದಿನಾಂಕ:07–08–2010. ರಲ್ಲಿ ವಿವರಿಸಿರುವಂತೆ, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 166 ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದಾಯ ವೆಚ್ಚಗಳ ಅಂದಾಜುಗಳನ್ನು ತಯಾರಿಸಿ ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಬೇಕಾಗಿರುತ್ತದೆ. ಅದರಂತೆ ಈ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಇಲಾಖೆಗಳ ಆದಾಯ ಮತ್ತು ವೆಚ್ಚಗಳ ಪಟ್ಟಿಗಳನ್ನು ಕ್ರೋಢೀಕರಿಸಲಾಗಿದೆ.

2010–11ನೇ ಸಾಲಿನ ಆಯವ್ಯಯವು ತಹಲ್‌ವರೆಗೆ ಮಂಡನೆಯಾಗದೇ ಇರುವುದರಿಂದ ತುರ್ತಾಗಿ ಆಯವ್ಯಯವನ್ನು ಕೌನ್ಸಿಲ್ ಸಭೆಯ ಮುಂದೆ ಮಂಡಿಸಬೇಕಾಗಿರುವ ಹಿನ್ನೆಲೆಯಲ್ಲಿ, ದಿನಾಂಕ 08–07–2010 ರಿಂದ 16–07–2010 ರವರೆಗೆ ಇಲಾಖಾವಾರು ವಿಶೇಷ ಸಭೆಯನ್ನು ನಡೆಸಿ ಹಿಂದಿನ ಸಾಲಿನ ಮತ್ತು ಪ್ರಸ್ತುತ ಸಾಲಿನ ಆದಾಯ ವೆಚ್ಚಗಳ ಬಗ್ಗೆ ಅಗತ್ಯ ತಿದ್ದುಪಡಿಗಳನ್ನು ಸ್ಥಾಯಿ ಸಮಿತಿಯು ಸೂಚಿಸಲಾಗಿದ್ದು, ಅದರಂತೆ ದಿನಾಂಕ 06–08–2010 ರಂದು ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಇವರೊಂದಿಗೆ ಚರ್ಚಿಸಿ ಪರಿಷ್ಕರಿಸಿದಂತೆ 2009–10ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಮತ್ತು 2010–11ನೇ ಸಾಲಿನ ಅಂದಾಜು ಆಯವ್ಯಯಗಳಲ್ಲಿ ಅಗತ್ಯ ತಿದ್ದುಪಡಿಯನ್ನು ಮಾಡಿ ಪರಿಷ್ಕೃತ ಕರಡು ಪ್ರತಿಯ ಅನುಮೋದನೆ ಕೋರಿ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ</u>**:- ಸಮಿತಿಯು ದಿನಾಂಕ 08-07-2010 ರಿಂದ 16-07-2010 ರವರೆಗೆ ಇಲಾಖಾವಾರು ವಿಶೇಷ ಸಭೆಯನ್ನು ನಡೆಸಿ ಪೂಜ್ಯ ಮಹಾಪೌರರು ಮಾನ್ಯ ಉಪ ಮಹಾಪೌರರು ಮತ್ತು ಎಲ್ಲಾ ಪಕ್ಷಗಳ ನಾಯಕರುಗಳು ಹಾಗೂ ಮಾನ್ಯ ಆಯುಕ್ತರವರೊಂದಿಗೆ ಚರ್ಚಿಸಿದ ನಂತರ, ಸಮಿತಿಯ ಸೂಚನೆಯಂತೆ ಅಗತ್ಯ ತಿದ್ದುಪಡಿಯನ್ನು ಮಾಡಿ ದಿನಾಂಕ 07-08-2010 ರಂದು ಆಯುಕ್ತರವರು ಮಂಡಿಸಿರುವ ಪರಿಷ್ಕೃತ ಕರಡು ಪ್ರತಿಯನ್ನು ಒಪ್ಪುತ್ತಾ ಮಹಾನಗರ ಪಾಲಿಕೆಯ ಪರಿಶೀಲನೆ ಹಾಗೂ ಒಪ್ಪಿಗೆಗೆ ಮಂಡಿಸುವುದೆಂದು ತೀರ್ಮಾನಿಸಲಾಯಿತು.

(ಪಿ.ಎನ್.ಸದಾಶಿವ)
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ